

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಇವರು ಶಿಕ್ಷಕರೋ ಕೀಚಕರೋ, ನೀವೇ ಹೇಳಿ....

“**ಈ**ಗಿನ ವಿದ್ಯಾವಂತರಿಂದಲೇ ಜಗತ್ತಿಗೆ ಮಹಾಹಾನಿಯಾಗುತ್ತಿರುವುದು. ವ್ಯಾವಹಾರಿಕ ಶಿಕ್ಷಣದೊಂದಿಗೆ ಆಧ್ಯಾತ್ಮಿಕ ಶಿಕ್ಷಣವು ಅವಶ್ಯಕವಾದುದು. ಯಾವ ಸಮಾಜದಲ್ಲಿ ಉತ್ತಮ ತಾಯಂದಿರಿಲ್ಲವೋ ಆ ಸಮಾಜವು ಮುಂದುವರಿಯುವುದು ಸಾಧ್ಯವಿಲ್ಲ” ಎಂದು ನಮ್ಮ ಗುರುವರ್ಯರು 1937 ರ ತಮ್ಮ ದಿನಚರಿ “ಆತ್ಮನಿವೇದನೆ” ಯಲ್ಲಿ ಬರೆದಿದ್ದಾರೆ. ಈ ಮಾತನ್ನು ಮುಂದುವರಿಸಿ “ಯಾವ ದೇಶದಲ್ಲಿ ಉತ್ತಮ ಶಿಕ್ಷಕರಿಲ್ಲವೋ ಆ ದೇಶ ಮುಂದುವರಿಯಲು ಸಾಧ್ಯವಿಲ್ಲ” ಎಂದು ಹೇಳಬಹುದು ಎನಿಸುತ್ತದೆ. Teachers are the architects of Nation. ಶಿಕ್ಷಕರು ದೇಶದ ಭವಿಷ್ಯವನ್ನು ರೂಪಿಸುವ ಮಹಾನ್ ಶಿಲ್ಪಿಗಳು. ಮೈಸೂರು ಮಹಾರಾಜಾಕಾಲೇಜಿನಲ್ಲಿ ಅತ್ಯುತ್ತಮ ಅಧ್ಯಾಪಕರೆಂದು ಹೆಸರಾಗಿದ್ದ ಡಾ. ಎಸ್ ರಾಧಾಕೃಷ್ಣನ್‌ರವರು ಭಾರತದ ಉಪರಾಷ್ಟ್ರಪತಿಯಾಗಿ ಆಯ್ಕೆಯಾದಾಗ ಅವರ ವಿದ್ಯಾರ್ಥಿಗಳಿಗೆ ಏಕಕಾಲದಲ್ಲಿ ಎಲ್ಲಿಲ್ಲದ ಸಂತೋಷ ಮತ್ತು ದುಃಖ. ಅವರನ್ನು ದೆಹಲಿಗೆ ಬೀಳ್ಕೊಡುವಾಗ ಮೆರವಣಿಗೆಯಲ್ಲಿ ಕರೆದೊಯ್ದು ಅವರು ಕೂತಿದ್ದ ಕುದುರೆ ಸಾರೋಟನ್ನು ಕಾಲೇಜಿನಿಂದ ಮೈಸೂರು ರೈಲ್ವೆನಿಲ್ದಾಣದವರೆಗೆ ಸ್ವತಃ ವಿದ್ಯಾರ್ಥಿಗಳೇ ಎಳೆದುಕೊಂಡುಹೋದರಂತೆ!

ಒಮ್ಮೆ ಅಮೇರಿಕೆಯಿಂದ ಹಿಂದಿರುಗುವಾಗ ಮಾರ್ಗಮಧ್ಯೆ ಪ್ಯಾರಿಸ್‌ನಲ್ಲಿ ವಿಮಾನವನ್ನು ಬದಲಾಯಿಸಬೇಕಿತ್ತು. ಪ್ಯಾರಿಸ್ಸಿನ ಚಾರ್ಲ್ಸ್ ಡಿಗಾಲೆ ವಿಮಾನ ನಿಲ್ದಾಣದ ಬೋರ್ಡಿಂಗ್ ಲಾಂಜ್‌ನಲ್ಲಿ ಕುಳಿತು ಮುಂಬಯಿಗೆ ಹೊರಡುವ ವಿಮಾನದ ನಿರೀಕ್ಷೆಯಲ್ಲಿದ್ದೆವು. ಸುತ್ತ ಕಣ್ಣುಹಾಯಿಸಿದಾಗ ವಿದೇಶೀಯರ ಮಧ್ಯೆ ಸ್ವದೇಶಕ್ಕೆ ಹೊರಟು ನಿಂತಿದ್ದ ಅನೇಕ ಅಪರಿಚಿತ ಭಾರತೀಯರು ಕಾಣಿಸಿದರು. ಅವರಲ್ಲಿ ಬಹುತೇಕ ಜನ ಹಿಂದಿ, ಗುಜರಾತಿ ಮತ್ತು ಇಂಗ್ಲೀಷಿನಲ್ಲಿ ಮಾತನಾಡುತ್ತಿದ್ದರೆ ಎದುರಿಗೆ ಅನತಿ ದೂರದಲ್ಲಿಯೇ ಕುಳಿತಿದ್ದ ಯುವದಂಪತಿಗಳು ಕನ್ನಡದಲ್ಲಿ ಮಾತನಾಡುವುದು ಕೇಳಿಸಿತು. ನಮ್ಮ ಕಿವಿ ನೆಟ್ಟಗಾದವು. “ಕನ್ನಡ ಎನೆ ಕಿವಿ ನಿಮಿರುವುದು” ಎಂಬ ಕವಿವಾಣಿ ಸ್ವಾನುಭವಕ್ಕೆ ಬಂದಿತ್ತು! ಯಾರೋ ನಮ್ಮ ರಾಜ್ಯದವರಿದ್ದಂತೆ ತೋರುತ್ತದೆ ಎಂದು ನಮ್ಮ ಜತೆಯಲ್ಲಿದ್ದ ಡಾ. ಸಿದ್ದಯ್ಯನಿಗೆ ಹೇಳಿದೆವು. ವಿಮಾನ ಹೊರಡಲು ಇನ್ನೂ ಒಂದು ಗಂಟೆ ಇತ್ತು. ಡಾ. ಸಿದ್ದಯ್ಯ ಅಡ್ಡಾಡಿಕೊಂಡು ಬರುವುದಾಗಿ ಅತ್ತಕಡೆ ಹೋದಾಗ ಆ ಅಪರಿಚಿತ ಕನ್ನಡಿಗ ಎದ್ದುನಿಂತು ಅವನಿಂದ ಏನನ್ನೋ ಕೇಳಿ ತಿಳಿದುಕೊಳ್ಳುತ್ತಿರುವಂತೆ ಕಾಣಿಸಿತು. ನಾವು ಸಿರಿಗೆರೆಯ ಗುರುಗಳು ಎಂದು ಗೊತ್ತಾದ ತಕ್ಷಣವೇ ತನ್ನ ಪತ್ನಿಯನ್ನು ಕರೆದುಕೊಂಡು ನಮ್ಮ ಹತ್ತಿರ ಬಂದನು. ಪಾಶ್ಚಾತ್ಯ ಸಂಸ್ಕೃತಿಯ ಆ ನೆಲದಲ್ಲಿ ಸ್ವಲ್ಪವೂ ಮುಜುಗರಪಟ್ಟುಕೊಳ್ಳದೆ ತನ್ನೆರಡೂ ಕೈಗಳನ್ನು ಅಡ್ಡಲಾಗಿ ಹಿಡಿದು ಕಿವಿಗಳನ್ನು ಸ್ಪರ್ಶಿಸಿ “ಯಾನಿ ಕಾನಿ ಚ ಪಾಪಾನಿ....ತ್ವಮೇವ ಶರಣಂ ಮಮ....” ಎಂದು ಮೆಲುದನಿಯಲ್ಲಿ ಹೇಳುತ್ತಾ ಉದ್ದಕ್ಕೆ ಅಡ್ಡ ಬಿದ್ದು ಅಭಿವಂದಿಸಿದನು. ಆ ಅಪರಿಚಿತ ವ್ಯಕ್ತಿಯ ಮುಖದಲ್ಲಿ ಭಾವುಕತೆ ಮಡುಗಟ್ಟಿತ್ತು. ತನ್ನ ಪರಿಚಯವನ್ನು ಮಾಡಿಕೊಂಡು “ನಾನು ತಮ್ಮ ಸಂಸ್ಥೆಯ ಹಿರೇಮಗಳೂರು ಶಾಲೆಯಲ್ಲಿ ಓದಿದವನು. ತಮ್ಮ ಮಠ ನನ್ನಂತಹ ಬಡವನಿಗೆ ಅನ್ನ ಹಾಕಿ ಓದಲು ಅವಕಾಶ ಮಾಡಿಕೊಡದೇ ಹೋಗಿದ್ದರೆ ನಾನು ಹಳ್ಳಿಯಲ್ಲಿ ದನಕಾಯುತ್ತಾ ಇರುತ್ತಿದ್ದೆ. ಯೂರೋಪ್‌ವರೆಗೆ ಬಂದು ಇಲ್ಲಿಯ ಕಂಪನಿಯಲ್ಲಿ ಕೆಲಸ ಪಡೆಯಲು ಆಗುತ್ತಿರಲಿಲ್ಲ” ಎಂದು ಗದ್ಗದಿತ ಕಂಠದಿಂದ ಹೇಳಿದ. ತನಗೆ ಪಾಠ ಹೇಳಿಕೊಟ್ಟ ಆಗಿನ ಅಧ್ಯಾಪಕರ ಹೆಸರುಗಳನ್ನು ಒಂದೊಂದಾಗಿ ಹೇಳಿ ಹೇಗಿದ್ದಾರೆಂದು ವಿಚಾರಿಸಿದ. ಅವರಲ್ಲಿ ಒಬ್ಬಿಬ್ಬರು ಸತ್ತುಹೋಗಿದ್ದರು. ಕೇಳಿ ಅವನ ಕಣ್ಣುಗಳು ತೇವಗೊಂಡವು!

ಯಾರು ಎಷ್ಟೇ ದೊಡ್ಡವರಾಗಿ ಬೆಳೆದರೂ ತಮ್ಮ ಶಿಕ್ಷಕರ ಮೇಲೆ ಅದರಲ್ಲೂ ವಿಶೇಷವಾಗಿ ಪ್ರಾಥಮಿಕ ಹಂತದಲ್ಲಿ ಪಾಠಮಾಡಿದ ಶಿಕ್ಷಕರ ಮೇಲೆ ವಿಶೇಷ ಗೌರವವನ್ನು ಹೊಂದಿರುತ್ತಾರೆ. ತಮಗೆ ಚಿಕ್ಕವಯಸ್ಸಿನಲ್ಲಿ ಕಿವಿಹಿಂಡಿದ, ಶುಂಟಿ ಕೊಂಬು ಕೊಟ್ಟ, ಒಂಟಿಗಾಲಲ್ಲಿ ನಿಲ್ಲಿಸಿದ ಶಿಕ್ಷಕರನ್ನು ಅವರು ಎಂದೂ ಮರೆಯಲು ಸಾಧ್ಯವಿಲ್ಲ. “ಸುಖವಿರುವುದು ಬಾಲ್ಯದಲ್ಲಲ್ಲ; ಅದರ ನೆನಪಿನಲ್ಲಿ” ಎನ್ನುತ್ತಾರೆ ಬೀchi. ‘ಮಾತನಾಡುವ

ದೇವರುಗಳು' ಎಂಬ ಅವರ ಪುಸ್ತಕದಲ್ಲಿ ಬಾಲ್ಯದ ಒಂದು ಘಟನೆಯನ್ನು ನೆನಪಿಸಿಕೊಳ್ಳುತ್ತಾರೆ. ಪ್ರಾಥಮಿಕ ಶಾಲೆಯಲ್ಲಿ ಬೀchi ಓದುತ್ತಿದ್ದಾಗ ಅವರಿಗೆ ರಾಘವೇಂದ್ರರಾಯರು ಎಂಬ ಶಿಕ್ಷಕರು ಇದ್ದರಂತೆ. ಜೇಬುಗಡಿಯಾರದ ಬೆಳ್ಳಿ ಸರಪಳಿ ಇಳಿಬಿದ್ದ ಉದ್ದನೆಯ ಕರಿಕೋಟು ಮತ್ತು ಜರಿಪೇಟವನ್ನು ಠಾಕುಠೀಕಾಗಿ ಧರಿಸುತ್ತಿದ್ದ ಅವರು ವ್ಯಾಕರಣ ಮತ್ತು ಭೂಗೋಳ ಪಾಠ ಮಾಡುತ್ತಿದ್ದರಂತೆ. ಒಂದು ದಿನ ರಾಯರು "All words that end in 'ly' are adverbs" ಎಂದು ಹೇಳಿದರಂತೆ. 'ಕಡೇ ಬೆಂಚಿನ ಗಿರಾಕಿ'ಯಾಗಿ ತೂಕಡಿಸುತ್ತಿದ್ದ ಬಾಲಕ ಬೀchi ಹೇಗೋ ಕೇಳಿಸಿಕೊಂಡು "For example Italy" ಎಂದು ಕೂಗಿ ಹೇಳಿದರಂತೆ! ಇಡೀ ತರಗತಿ ನಗೆಗಡಲಿನಲ್ಲಿ ತೇಲಿತು. ರಾಯರು ಸಿಟ್ಟಿಗೆದ್ದು 'ಬಲರಾಮನ ಗಂಡುಗೊಡಲಿ'ಯಂತಿದ್ದ ತಮ್ಮ ಕೊಡೆಯನ್ನು ಕೈಗೆತ್ತಿಕೊಂಡು ಬಾಲಕ ಬೀchiಯ ಬೆನ್ನ ಮೇಲೆ ದಬದಬನೆ ಒಂದಾದ ಮೇಲೊಂದರಂತೆ ಕೊಡೆ ಮುರಿಯುವವರೆಗೂ ಬಾರಿಸಿದರಂತೆ! 'ಕೊಡೆ ಮುರಿದ ಮೇಲೆಯೇ ನನ್ನ ಬೆನ್ನಿಗೆ ವಿಶ್ರಾಂತಿ ದೊರೆಯಿತು' ಎಂದು ಬೀchi ರೋಚಕವಾಗಿ ಬರೆಯುತ್ತಾರೆ. ಕಡೆಯ ಬೆಲ್ ಹೊಡೆದು ಶಾಲೆಯಿಂದ ಮನೆಗೆ ಓಟ ಕೀಳುತ್ತಿದ್ದಾಗ ರಾಯರು ಜವಾನನ ಮೂಲಕ ಹೇಳಿಕಳುಹಿಸಿದರಂತೆ. ಮತ್ತೆ ಹೊಡೆಯಲು ಇಷ್ಟುಬೇಗ 'ಇನ್ನೊಂದು ಹೊಸ ಕೊಡೆ ತಂದರೆ' ಎಂದು ಗಡಗಡನೆ ನಡುಗುತ್ತಾ ಹತ್ತಿರ ಹೋದಾಗ ರಾಯರು ಬಾಲಕ ಬೀchiಯ ಹೆಗಲ ಮೇಲೆ ಕೈಯಿಟ್ಟು ಬೆನ್ನನ್ನು ನೇವರಿಸಿ 'ಭಾಳಾ ನೋವಾಯಿತೇನೋ?' ಎಂದು ಕೇಳಿದರಂತೆ! "ನನ್ನದೇ ತಪ್ಪಪ್ಪಾ. All words ending in 'ly' are adverbs ಅಲ್ಲ, generally ಅನ್ನದಿದ್ದುದು ತಪ್ಪು, ನಿನ್ನ ಹೊಡೆದುದಂತೂ ಬಹು ದೊಡ್ಡ ತಪ್ಪು" ಎಂದು ಪಶ್ಚಾತ್ತಾಪದ ದನಿಯಲ್ಲಿ ಹೇಳಿದರಂತೆ. ರಾಯರ ಮಾತುಗಳನ್ನು ಕೇಳಿ 'ಪಳಪಳ ಹನಿಯಿತು ನನ್ನ ಕಣ್ಣು' ಎಂದು ಬೀchi ಬರೆಯುತ್ತಾರೆ.

ನಮ್ಮ ಗುರುವರ್ಯರ ಕಾಲದಲ್ಲಿ ಸಿರಿಗೆರೆಯ ಪ್ರೌಢಶಾಲೆಯ ಸೇವಾದಳ ಆಗಿನ ಹಳೆಯ ಮೈಸೂರು ಪ್ರಾಂತ್ಯದಲ್ಲಿ ಹೆಸರಾಗಿತ್ತು. ಬೆಂಗಳೂರಿನಲ್ಲಿ 1952 ರಲ್ಲಿ ನಡೆದ ರ್‍ಯಾಲಿಯಲ್ಲಿ ಜನರಲ್ ಕಾರಿಯಪ್ಪನವರಿಂದ ಪ್ರಥಮ ಬಹುಮಾನ ಪಡೆದಿತ್ತು. ಆ ವಿದ್ಯಾರ್ಥಿಗಳನ್ನು ಶಿಸ್ತಿನಿಂದ ತಯಾರುಮಾಡಿದ ಪಾಂಡು ಎಂಬ ದೈಹಿಕಶಿಕ್ಷಕನಿದ್ದ. ಒಮ್ಮೆ ಶಾಲಾ ಪ್ರಾರ್ಥನೆಗೆ ತಡವಾಗಿ ಬಂದ ವಿದ್ಯಾರ್ಥಿಯೋರ್ವನಿಗೆ ಸಿಡಿಮಿಡಿಗೊಂಡು ಬಹಳವಾಗಿ ಹೊಡೆದ. ವಿದ್ಯಾರ್ಥಿ ಆಸ್ಪತ್ರೆ ಸೇರಿದ. ಪಾಂಡು ಪಶ್ಚಾತ್ತಾಪ ಪಟ್ಟುಕೊಂಡು ಇನ್ನುಮುಂದೆ ವಿದ್ಯಾರ್ಥಿಗಳನ್ನು ಹೊಡೆಯುವುದಿಲ್ಲವೆಂದು ನಮ್ಮ ಗುರುವರ್ಯರ ಸನ್ನಿಧಿಯಲ್ಲಿ ಎಲ್ಲ ವಿದ್ಯಾರ್ಥಿಗಳ ಎದುರು ಪ್ರಮಾಣ ಮಾಡಿದ. ಭಾವಾವೇಶದಲ್ಲಿ ದಿಢೀರನೆ ಮಚ್ಚು ತೆಗೆದುಕೊಂಡು ಮಹಾಭಾರತದ ಏಕಲವ್ಯನಂತೆ ತನ್ನ ಹೆಬ್ಬೆರಳನ್ನೇ ಕತ್ತರಿಸಿಕೊಂಡ. ವ್ಯತ್ಯಾಸವೆಂದರೆ ನಮ್ಮ ಗುರುವರ್ಯರೇನೂ ದ್ರೋಣಾಚಾರ್ಯರಂತೆ ಈ ಆಧುನಿಕ ಏಕಲವ್ಯ ಪಾಂಡುವಿನ ಹೆಬ್ಬೆರಳನ್ನೇನೂ ಕೇಳಿರಲಿಲ್ಲ. ಆ ಭೀಕರ ದೃಶ್ಯವನ್ನು ಕಣ್ಣಾರೆ ನೋಡಿದ ಹಿರಿಯರು ಈಗಲೂ ಇದ್ದಾರೆ. ಹೊಡಿಸಿಕೊಂಡ ಹಂಪನೂರು ಗ್ರಾಮದ ನಾಗಪ್ಪನೂ ಇದ್ದಾನೆ.

ಐದಾರು ದಶಕಗಳ ಹಿಂದಿನ ಕಾಲದ ಶಿಕ್ಷಕರ ಮನೋಧರ್ಮಕ್ಕೂ ಮತ್ತು ತೀರಾ ಇತ್ತೀಚಿನ ಕಾಲದ ಶಿಕ್ಷಕರ ಮನೋಧರ್ಮಕ್ಕೂ ಬಹಳ ವ್ಯತ್ಯಾಸವಿರುವುದನ್ನು ಕಾಣಬಹುದಾಗಿದೆ. ಆಗಿನ ಕಾಲದ ಶಿಕ್ಷಕರಿಗೆ ಸಮಾಜದಲ್ಲಿ ಒಂದು ವಿಶೇಷ ಸ್ಥಾನಮಾನ ಮತ್ತು ಗೌರವ ಇದ್ದವು. ಅವರು ಜೀವನದಲ್ಲಿ ಕೆಲವೊಂದು ಮೌಲ್ಯಗಳನ್ನು ನಂಬಿದವರಾಗಿದ್ದರು. ಪಾಠ ಕೇಳಿದ ವಿದ್ಯಾರ್ಥಿಗಳ ಹೃದಯದಲ್ಲಿ ಅವರ ವ್ಯಕ್ತಿತ್ವದ ಛಾಪು ಮೂಡುತ್ತಿತ್ತು. ಈಗಿನ ಕಾಲದ ಅನೇಕ ಶಿಕ್ಷಕರು ಕೊಳಕು ರಾಜಕೀಯದಲ್ಲಿ ತೊಡಗಿ, ಪಾನಮತ್ತರಾಗಿ, ಕೆಟ್ಟ ರಾಜಕಾರಣಿಗಳ ಬಾಲಂಗೋಚಿಗಳಾಗಿ ಶಿಕ್ಷಕವೃತ್ತಿಗೆ ಕಳಂಕ ಬರುವಂತೆ ನಡೆದುಕೊಳ್ಳುತ್ತಿರುವುದು ವಿಷಾದನೀಯ. ಗಾಂಧೀಜಿ ಪರಿಗಣಿಸಿದ ಸಪ್ತಪಾತಕಗಳಲ್ಲಿ 'ತತ್ವರಹಿತ ರಾಜಕೀಯ' (Politics without principles) ಒಂದು. ಈ ಮಾತಿನ ಎಳೆಯನ್ನು ಹಿಡಿದು "Teachers without principles are murderors" (ಉತ್ತಮ ಮೌಲ್ಯಗಳಿಲ್ಲದ ಶಿಕ್ಷಕರು ಕೊಲೆಗಡುಕರು) ಎಂದು ಹೇಳಬೇಕೆನಿಸುತ್ತದೆ.

ಶಿಕ್ಷಕರು ಹೇಗಿರಬೇಕು ಎಂಬುದಕ್ಕೆ ಮೇಲಿನವು ಒಳ್ಳೆಯ ಉದಾಹರಣೆಗಳಾದರೆ, ಹೇಗಿರಬಾರದು ಎಂಬುದಕ್ಕೆ ನಮ್ಮ ಅನುಭವಕ್ಕೆ ಬಂದ ಎರಡು ಕೆಟ್ಟ ಉದಾಹರಣೆಗಳು ಹೀಗಿವೆ: ರಾಜ್ಯದ 14 ಜಿಲ್ಲೆಗಳ ಗ್ರಾಮೀಣ ಭಾಗದಲ್ಲಿ ನಮ್ಮ ಮಠದ ನೂರಾರು ಶಾಲಾ-ಕಾಲೇಜುಗಳು ಇವೆ. ಅವುಗಳಲ್ಲಿ ಪ್ರೌಢಶಾಲೆಯೊಂದರ ಶಿಕ್ಷಕ ಶಾಲೆಯ ಹುಡುಗಿಗೆ ಒಂದು ಪ್ರೇಮಪತ್ರವನ್ನು ಬರೆದಿದ್ದ. ಪೋಷಕರು ಆ ಪತ್ರವನ್ನು ಲಗತ್ತಿಸಿ ಶಿಕ್ಷಕನ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಲು ನಮಗೆ ದೂರು ಸಲ್ಲಿಸಿದರು. ಎರಡು ಮಕ್ಕಳ ತಂದೆಯಾದ ಆ ಶಿಕ್ಷಕ ತನ್ನ ಮಗಳ ವಯಸ್ಸಿನ ಬಾಲಕಿಗೆ ನಾಚಿಕೆ ಇಲ್ಲದೆ ಬರೆದ ಆ ಪತ್ರದ ಆಯ್ದ ಭಾಗ ಇಂತಿದೆ:

**“ಕು॥ .......ಳಿಗೆ ನಿನ್ನ ಭಾವಿ ಪತಿಯು ಮಾಡುವ ಆಶೀರ್ವಾದಗಳು.**

**ಏನೆಂದರೆ ನೀನು ಈ ಪತ್ರ ಕಂಡ ಕೂಡಲೆ ನಾನು ಕೊಟ್ಟಿರುವ ವಿಳಾಸಕ್ಕೆ ಬರುವುದು. ಫೋಟೋ ತೆಗೆಸೋಣ. ನಿನ್ನನ್ನು SSLC ಪಾಸು ಮಾಡಿಸಿ, PUC ವರೆಗೂ ವಿದ್ಯಾಭ್ಯಾಸ ಮಾಡಿಸಿ, TCH ಮಾಡಿಸಿ ಕೆಲಸ ಕೊಡಿಸುತ್ತೇನೆ. ನೀನು ನನ್ನ ಬಾಳಸಂಗಾತಿಯಾಗುವುದು. ನೀನು ಒಪ್ಪಿದಲ್ಲಿ ನಿನ್ನನ್ನು ನಾನು ಸುಖವಾಗಿ ಸಾಕುತ್ತೇನೆ ಮತ್ತು ನಿನ್ನ ಜೀವನಕ್ಕೆ ಒಂದು ದಾರಿ ಮಾಡಿಕೊಡುತ್ತೇನೆ. ಇದರ ಜೊತೆಗೆ ನನ್ನ ಫೋಟೋ ಕಳಿಸಿರುತ್ತೇನೆ. ನಿನ್ನ ಫೋಟೋವನ್ನು ಸಹ ತಕ್ಷಣವೇ ಕಳುಹಿಸಿಕೊಡುವುದು. ನೀನು ಅದೇನು ಮೋಡಿ ಮಾಡಿರುವೆಯೋ ರಾತ್ರಿ ಹಗಲು ನಿನ್ನದೇ ಧ್ಯಾನ, ಊಟ ನಿದ್ರೆಯಿಲ್ಲದೆ. ಸದಾ ನನ್ನ ಕಣ್ಮುಂದೆ ಬಂದು ಕಾಡುತ್ತಿರುವೆ. ಇದಕ್ಕೆ ಕಾರಣ ಗೊತ್ತಿಲ್ಲ. ಕನಸಿನಲ್ಲಿಯೂ ಸಹ ಬಂದು ಮುತ್ತು ಮುತ್ತಿನ ಮಳೆಗರೆಯುತ್ತೀಯಾ. ಒಳ್ಳೆಯದಕ್ಕೋ ಕೆಟ್ಟದಕ್ಕೋ ಗೊತ್ತಿಲ್ಲ.**
**- ನಿನ್ನ ಪ್ರೀತಿಯ (ಸಹಿ).”**

ಇದು ಊರಲ್ಲೆಲ್ಲಾ ಸುದ್ದಿಯಾಗಿ ಏನೂ ತಪ್ಪು ಮಾಡದ ಮುಗ್ಧ ಹುಡುಗಿ ನಾಚಿಕೆಯಿಂದ ಶಾಲೆಗೆ ಹೋಗುವುದನ್ನೇ ಬಿಟ್ಟಳು. ‘ಅಂಗೈ ಹುಣ್ಣಿಗೆ ಕನ್ನಡಿ ಏತಕ್ಕೆ’ ಎಂಬಂತೆ ಬಲವಾದ ಸಾಕ್ಷಿಪುರಾವೆಗಳಿದ್ದರೂ ಅಪರಾಧಿಯು ನಿಜಸಂಗತಿಯನ್ನು ಮುಚ್ಚಿಟ್ಟು ಜಿಲ್ಲಾ ಮತ್ತು ಉಚ್ಚನ್ಯಾಯಾಲಯದವರೆಗೂ ಹೋಗಿ ಅಡೆತಡೆಗಳನ್ನುಂಟುಮಾಡಿದನು. ಆದರೂ ಅದಾವುದಕ್ಕೂ ಜಗ್ಗದೆ ಮೇಲ್ಕಂಡ ಪ್ರಕರಣವನ್ನು ನಿಯಮಾನುಸಾರ ವಿಚಾರಣೆ ನಡೆಸಿ ಈ ಕೀಚಕನನ್ನು ಸೇವೆಯಿಂದ ವಜಾ ಮಾಡಲು ನಮಗೆ ಎರಡು ವರ್ಷಗಳಿಗೂ ಹೆಚ್ಚು ಕಾಲ ಬೇಕಾಯಿತು.

ಇದಕ್ಕೂ ಮುನ್ನ 80 ರ ದಶಕದಲ್ಲಿ ನಡೆದ ಇಂತಹುದೇ ಇನ್ನೊಂದು ಪ್ರಕರಣದಲ್ಲಿ ತನ್ನ ಮಗಳಿಗೆ ಪ್ರೇಮಪತ್ರ ಬರೆದ ಶಿಕ್ಷಕನನ್ನು ಜೀವಸಹಿತ ಬಿಡುವುದಿಲ್ಲ ಕಡಿದುಹಾಕುತ್ತೇನೆಂದು ಅವಳ ತಂದೆ ಕೈಯಲ್ಲಿ ಕುಡುಗೋಲು ಹಿಡಿದುಕೊಂಡು ರುದ್ರಭೀಕರನಾಗಿ ಶಾಲೆಯತ್ತ ಧಾವಿಸಿದ. ವಿಷಯ ತಿಳಿದು ಶಿಕ್ಷಕ ಕಾಲ್ಕಿತ್ತ. ಶಾಲಾಸಮಿತಿಯವರು ತುರ್ತುಸಭೆ ಸೇರಿ ಆ ಶಿಕ್ಷಕನನ್ನು ಸೇವೆಯಿಂದ ವಜಾಗೊಳಿಸಬೇಕೆಂದು ಸರ್ವಾನುಮತದಿಂದ ತೀರ್ಮಾನ ಮಾಡಿ ಕಳುಹಿಸಿದ ಠರಾವು ನಮ್ಮ ಸಂಸ್ಥೆಯ ಮಾಸಿಕಸಭೆಯಲ್ಲಿ ಪರಿಶೀಲನೆಗೆ ಬಂತು. ಆಡಳಿತಮಂಡಳಿಯ ಸದಸ್ಯರು ಆ ಶಿಕ್ಷಕನನ್ನು ಕೂಡಲೇ ಬೇರೆಡೆಗೆ ವರ್ಗಮಾಡಬೇಕೆಂದು ಸಲಹೆ ನೀಡಿದರೂ ಹಾಗೆ ಮಾಡುವುದರಿಂದ ಆತನ ಅನೈತಿಕ ನಡವಳಿಕೆಗೆ ನಾವೇ ರಕ್ಷಣೆ ಕೊಟ್ಟಂತಾಗುತ್ತದೆಯೆಂದು ಒಪ್ಪದೆ ವಿಷಯವನ್ನು ಮುಂದಕ್ಕೆ ಹಾಕಿಸಿದೆವು. ಆಗ ಯಾವುದೇ ನೌಕರನು ಸತತವಾಗಿ ನಾಲ್ಕು ತಿಂಗಳು ಗೈರುಹಾಜರಾದರೆ ನೋಟೀಸು ಕೊಟ್ಟು ಬರದಿದ್ದರೆ ಸೇವೆಯಿಂದ ವಜಾ ಮಾಡಬಹುದೆಂಬ ನಿಯಮವಿತ್ತು. ಆ ನಿಯಮದಡಿಯಲ್ಲಿ ಶಿಕ್ಷಕನನ್ನು ಸೇವೆಯಿಂದ ವಜಾಗೊಳಿಸುವುದು ನಮ್ಮ ಉದ್ದೇಶವಾಗಿತ್ತು. ಅಪರಾಧವೆಸಗಿದ ಶಿಕ್ಷಕನನ್ನು ವಿಚಾರಣೆ ನಡೆಸಿ ದಂಡಿಸುವುದಕ್ಕಿಂತ ಇದು ಸುಲಭವಾದ ಮಾರ್ಗವಾಗಿತ್ತು. ನಮ್ಮ ನಿರೀಕ್ಷೆಯಂತೆ ಶಿಕ್ಷಕ ಶಾಲೆಗೆ ಮರಳಿ ಬರಲಿಲ್ಲ. ಈ ಮಧ್ಯೆ ಶಾಲಾಸಮಿತಿಯವರಿಂದ ಠರಾವಿನ ಮೇಲೆ ಠರಾವುಗಳು ಬಂದು ನಮ್ಮ ಮೇಲೆ ಒತ್ತಡ ಜಾಸ್ತಿಯಾಯಿತು. ಆದರೂ ಸಹಿಸಿಕೊಂಡು ನಾಲ್ಕು ತಿಂಗಳು ಕಾಯ್ದು ಅಪರಾಧವೆಸಗಿದ್ದ ಶಿಕ್ಷಕನಿಗೆ ಕರ್ತವ್ಯದ ಮೇಲೆ ಹಾಜರಾಗಲು ನೋಟೀಸುಕೊಟ್ಟು ಬಾರದ ಕಾರಣ ಅವನನ್ನು ಸೇವೆಯಿಂದ ವಜಾಗೊಳಿಸಿದೆವು.

ವಜಾ ಆದೇಶ ಹೊರಬಿದ್ದ ಕೆಲವೇ ದಿನಗಳಲ್ಲಿ ಗ್ರಾಮದ ಇನ್ನೊಂದು ಗುಂಪಿನ ಜನರು ಬಂದರು. ಆತನಿಗೆ ಸೂಕ್ತ ದಂಡ ವಿಧಿಸಿ ಕೆಲಸದ ಮೇಲೆ ತೆಗೆದುಕೊಳ್ಳುವಂತೆ ನಮಗೆ ಬೇಕಾದವರಿಂದ ಹೇಳಿಸಿ ಒತ್ತಡ ತಂದರು. ಆಗತಾನೇ ಮಠದ ಆಡಳಿತದ ಚುಕ್ಕಾಣಿ ಹಿಡಿದಿದ್ದ ನಾವು ಸಂದಿಗ್ಧತೆಗೆ ಒಳಗಾದೆವು. ಈಗಾಗಲೇ ವಜಾ ಆದೇಶ ವಿದ್ಯಾ ಇಲಾಖೆಗೆ ಹೋಗಿರುವುದರಿಂದ ಕಷ್ಟವಾಗುತ್ತದೆ ಅದನ್ನು ತೆಗೆದುಕೊಂಡು ಬಂದರೆ ನೋಡೋಣವೆಂದು diplomatic ಆಗಿ ಹೇಳಿಕಳುಹಿಸಿದೆವು. ಆದರೆ ನಮ್ಮ ಲೆಕ್ಕಾಚಾರ ತಲೆಕೆಳಗಾಗಿತ್ತು. ವಾಪಾಸು ಹೋದ ಮುಖಂಡರು ವಿದ್ಯಾ ಇಲಾಖೆಯಲ್ಲಿದ್ದ ವಜಾ ಆದೇಶದ ಪೂರ್ಣ ಕಡತವನ್ನು ವಾಪಾಸು ತೆಗೆದುಕೊಂಡು ಬಂದು ನಮ್ಮ ಮುಂದಿಟ್ಟರು! ಅದನ್ನು ನೋಡಿ ವಿಸ್ಮಯಗೊಂಡು ನಮ್ಮ ಅಸಂತುಷ್ಟಿಯನ್ನು ತೋರಗೊಡದೆ ‘ಒಂದು ಪಕ್ಷ ನಿಮ್ಮ ಮಗಳಿಗೇ ಆ ಶಿಕ್ಷಕ ಪ್ರೇಮಪತ್ರ ಬರೆದಿದ್ದರೆ ನಿಮ್ಮ ಮನಸ್ಸಿಗೆ ಹೇಗಾಗುತ್ತಿತ್ತು, ಸ್ವಲ್ಪ ಯೋಚಿಸಿರಿ’ ಎಂದು ಹೇಳಿ ಆ ಹುಡುಗಿಯ ತಂದೆಯನ್ನು ಕರೆದುಕೊಂಡು ಬಂದರೆ ನೋಡೋಣವೆಂದು ಎರಡನೆಯ diplomatic ಬಾಣವನ್ನು ಬಿಟ್ಟೆವು. ಇದಂತೂ ಅವರಿಂದ ಸಾಧ್ಯವಾಗದ ಮಾತು ಎಂಬ ನಮ್ಮ ನಿರೀಕ್ಷೆ ಹುಸಿಯಾಗಿತ್ತು! ಒಂದೆರಡು ದಿನಗಳಲ್ಲಿಯೇ ಆ ಹುಡುಗಿಯ ತಂದೆಯನ್ನು ನಮ್ಮ ಮುಂದೆ ಹಾಜರುಪಡಿಸಿದರು. ‘ಏನಪ್ಪಾ ಏನು ಹೇಳುತ್ತೀಯಾ?’ ಎಂದು ಕೇಳಿದರೆ ಆ ‘ಕುಡುಗೋಲಿನ ವೀರ’ ‘ಹರ ಮುನಿದರೂ ಗುರುಕಾಯ್ವನು ಎನ್ನುವಂತೆ ತಾವು ದೊಡ್ಡ ಮನಸ್ಸು ಮಾಡಿ ಅವನನ್ನು ಕ್ಷಮಿಸಿ ಕೆಲಸದ ಮೇಲೆ ವಾಪಾಸ್ಸು ತೆಗೆದುಕೊಳ್ಳಿ ಬುದ್ದಿ’ ಎಂದು ನಮಗೇ ಬುದ್ಧಿವಾದ ಹೇಳುವುದೇ! ‘ಅದರಂತೆ ಬರೆದುಕೊಡುತ್ತೀಯಾ?’ ಎಂದು ಕೇಳಿದ್ದಕ್ಕೆ ಮುಖಂಡರು ಆತನಿಂದ ನಮ್ಮ ಕಣ್ಮುಂದೆಯೇ ತನ್ನ ಅಭ್ಯಂತರವೇನೂ ಇಲ್ಲವೆಂದು ಬರೆಸಿಯೂ

ಕೊಟ್ಟರು. ನಮ್ಮ ತಾಳ್ಮೆಯ ಕಟ್ಟೆ ಒಡೆದಿತ್ತು. ಸಾಮ-ದಾನ-ಭೇದಗಳಿಗೆ ಬಗ್ಗುವ ಜನರು ಇವರಲ್ಲವೆಂದು ತೀರ್ಮಾನಿಸಿ ಕೆಂಡಾಮಂಡಲರಾಗಿ 'ನಮ್ಮ ಮೇಲೆ ಇಷ್ಟೊಂದು ಒತ್ತಾಯ ತರಲು ನಿಮಗೆ ಸ್ವಲ್ಪವೂ ನಾಚಿಕೆಯಾಗುವುದಿಲ್ಲವೇ?' ಎಂದು ತರಾಟೆಗೆ ತೆಗೆದುಕೊಂಡೆವು. ಆಗ ಅವರ ಒತ್ತಾಯದ ಹಿಂದೆ ಇದ್ದ ರಹಸ್ಯ ಬಯಲಾಯಿತು.

ಅವರು ಒಂದು ನೂಲಿನ ಗಿರಣಿಯನ್ನು ಮಾಡಲು ಹೊರಟಿದ್ದರು. ಅದಕ್ಕೆ ರೈತರಿಂದ ಒಂದೆರಡು ಕೋಟಿ ಷೇರು ಹಣ ಸಂಗ್ರಹಿಸಬೇಕಾಗಿತ್ತು. ಬಡರೈತರ ಕೈಯಲ್ಲಿ ಷೇರುಧನ ಪಾವತಿಸಲು ಹಣವೆಲ್ಲಿಂದ ಬರಬೇಕು? ಅದಕ್ಕಾಗಿ ಗ್ರಾಮೀಣ ಬ್ಯಾಂಕಿನಿಂದ ರೈತರ ಹೆಸರಿಗೆ ಸಾಲ ಮುಂಜೂರು ಮಾಡಿಸಿ ಆ ಸಾಲದ ಮೊತ್ತವನ್ನು ರೈತರಿಂದ ಷೇರು ಬಂದಂತೆ ಜಮಾ ಮಾಡಿಕೊಳ್ಳುವುದು ಅವರ ಉದ್ದೇಶವಾಗಿತ್ತು. ಬ್ಯಾಂಕಿನಿಂದ ರೈತರಿಗೆ ಸಾಲ ಮುಂಜೂರು ಮಾಡಬೇಕಾಗಿದ್ದ ಅಧಿಕಾರಿ ನಮ್ಮಿಂದ ವಜಾಗೊಂಡಿದ್ದ ಶಿಕ್ಷಕನ ಮಾವ! 'ನಿಮ್ಮ ಗುರುಗಳು ನನ್ನ ಅಳಿಯನನ್ನು ಕೆಲಸದಿಂದ ವಜಾ ಮಾಡಿದ್ದಾರೆ. ವಾಪಾಸು ತೆಗೆದುಕೊಳ್ಳುವಂತೆ ಮಾಡಿರಿ, ಹಾಗಾದರೆ ನಿಮ್ಮ ಸಾಲ ಮುಂಜೂರು ಮಾಡುತ್ತೇನೆ' ಎಂದು ಆ ಅಧಿಕಾರಿ ಪಟ್ಟುಹಿಡಿದಿದ್ದ! ನಾವಂತೂ ವಜಾ ಆದೇಶವನ್ನು ವಾಪಾಸ್ಸು ತೆಗೆದುಕೊಳ್ಳಲು ಬಿಲ್‌ಕುಲ್ ನಿರಾಕರಿಸಿದೆವು. ಬೇರೆ ರೀತಿಯಲ್ಲಿ ಅವರ ಸಮಸ್ಯೆ ಬಗೆಹರಿಸಿದೆವು. ಕಾರ್ಖಾನೆ ಆರಂಭಗೊಂಡರೂ ಅಸಮಾಧಾನದ ಕಿಚ್ಚು ಹೊಗೆಯಾಡುತ್ತಿತ್ತು! ಗಿರಣಿಯಿಂದ ಉತ್ಪಾದನೆಗೊಂಡ ನೂಲು ಮಾತ್ರ ಮಹಾಭಾರತದಲ್ಲಿ ದುರ್ಯೋಧನನು ಶ್ರೀಕೃಷ್ಣನನ್ನು ಬಂಧಿಸಲಾಗದಂತೆ ಈ ಆಧುನಿಕ ಭಾರತದ 'ಉದ್ಯೋಗಪರ್ವ'ದಲ್ಲಿ ನಮ್ಮನ್ನು ಬಂಧಿಸಲು ಆಗಲಿಲ್ಲ!

21.1.2009

ಶ್ರೀ ತರಳಬಾಳು ಜಗದ್ಗುರು
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑